**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 215/2021
ಪಿಡಬ್ಲು :5 ಸಿಡಬ್ಲು :19

ಸಾಕ್ಷಿಯ ಹೆಸರು : ಶ್ರೀಮತಿ ಮೀನಾಕ್ಷಿ ಬರಮಯ್ಯ
ಗಂಡನ ಹೆಸರು : ಶ್ರೀ. ಪರುಶರಾಮ
ವಯಸ್ಸು : 32 ವರ್ಷ
ಉದ್ಯೋಗ : ತರಕಾರಿ ವ್ಯಾಪಾರ
ವಾಸ್ತವ್ಯ : ಶಾಹಾಪೂರ, ಆನಂದವಾಡಿ, ಬೆಳಗಾವಿ
ದಿನಾಂಕ :29-06-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

(ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ವರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ವರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

2021 ರಲ್ಲಿ ನಾನು ಬೆಳಗಾವಿ ನಗರದ, ಶಹಪೂರದ ಅಳವಣಗಲ್ಲಿಯಲ್ಲಿ ಸುಮಾರು ವರ್ಷ ವಾಸ ಇದ್ದು. ಈಗ ಒಂದು ವರ್ಷದಿಂದ ಆನಂದವಾಡಿಯಲ್ಲಿ ವಾಸ ಇದ್ದೇನೆ. ನಾನು ವಾಸ ಇದ್ದ ಕಟ್ಟಡದ ಮೇಲ್ಭಾಗದ ಮನೆಯಲ್ಲಿ ಈಗ ವೀಡಿಯೊ ಕಾನ್ಫರೆನ್ಸಿಂಗ ಮೂಲಕ ವಿಚಾರಣೆಗೆ ಹಾಜಾರಾಗಿರುವ ಆರೋಪಿ ಸಹ ಬಾಡಿಗೆಗೆ ವಾಸ

ಇದ್ದನು. ಆತನೊಂದಿಗೆ ಆ ಮನೆಯಲ್ಲಿ ಯಾರು ಯಾರು ವಾಸ ಇರುತ್ತಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ವರ್ಷ ತಿಂಗಳು ಗೊತ್ತಿರುವುದಿಲ್ಲ, ನಾನು ಕೆಲಸ ಮುಗಿಸಿಕೊಂಡು ಮನೆಗೆ ಬಂದ ನಂತರ ನಮ್ಮ ಕಟ್ಟಡದಲ್ಲಿ ವಾಸ ಇದ್ದ ಆರೋಪಿಯ ಮನೆಯಲ್ಲಿ ಒಂದು ಹೆಣ್ಣು ಮಗಳು ತೀರಿಕೊಂಡಿದ್ದಾಳೆ ಎಂದು ಗೊತ್ತಾಯಿತು. ಏನಾಗಿ ತೀರಿಕೊಂಡಳು ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಆ ಮಹಿಳೆ ತೀರಿಕೊಳ್ಳುವ 2 ತಿಂಗಳ ಮೊದಲು ಆ ಮನೆಗೆ ಬಾಡಿಗೆಗೆ ಬಂದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಈ ಸಾಕ್ಷಿಯು ಸಾಕ್ಷಿದಾರಾಗಿದ್ದು, ಸಾಕ್ಷಿ ಹೇಳಿಕೆಯನ್ನು ಪರಿಗಣಿಸಿದ್ದು ಸಾಕ್ಷಿಯು ವ್ಯತೀರಿಕ್ತವಾಗಿ ಹೇಳಿಕೆ ನೀಡಿದ್ದರಿಂದ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದ</u>**

2. ತೀರಿಕೊಂಡ ಹೆಣ್ಣು ಮಗಳ ಹೆಸರು ಜ್ಯೋತಿ ಎನ್ನುವುದು ಸರಿ. ವಿಚಾರಣೆಗೆ ಹಾರಾಗಿರುವ ಆರೋಪಿ ಸದರಿ ಜ್ಯೋತಿ ಅವರ ಗಂಡ ಎನ್ನುವುದು ಸರಿ. ಸದರಿ ಜ್ಯೋತಿ ಅವರು ನಮ್ಮ ಮನೆಗೆ ಆಗಾಗ ಬರುತ್ತಿದ್ದು ಆಕೆಯ ಗಂಡ ಅಂದರೆ ಆರೋಪಿ ಆಕೆಗೆ ಕಿರುಕಳು ಕೊಡುತ್ತಿದ್ದ ಬಗ್ಗೆ ನನ್ನೊಂದಿಗೆ ಹೇಳಿಕೊಳ್ಳುತ್ತಿದ್ದಳು ಎನ್ನುವುದು ಸರಿಯಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿದಾಗ ಮೃತ ಜ್ಯೋತಿ ಅವರು ಬದುಕಿದಾಗ ನಮ್ಮ ಮನೆಗೆ ಬರುತ್ತಿದ್ದು, ಆಕೆಯ ಗಂಡ ಆಕೆಗೆ ಕಿರುಕುಳ ಕೊಡುತ್ತಿದ್ದ, ಬೈಯುವುದು ಹೊಡೆಯುವುದು ಮಾಡುತ್ತಿದ್ದ, ಬಗ್ಗೆ ನನ್ನೊಂದಿಗೆ ಹೇಳಿಕೊಳ್ಳುತಿದ್ದಳು ಎಂದು ನಾನು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಹೇಳಿಕೆ ಭಾಗವನ್ನು ನಿಪಿ–10 ಎಂದು ಗುರುತಿಸಲಾಯಿತು.

3. ಆರೋಪಿ ತನ್ನ ಹೆಂಡತಿಯ ಕುತ್ತಿಗೆಯನ್ನು ಕೈಯಿಂದ ಹಿಚುಕಿ, ಅಥವಾ ಯಾವುದೋ ವಸ್ತುವಿನಿಂದ ಕುತ್ತಿಗೆಗೆ ಬಿಗಿದು ಉಸಿರು ಕಟ್ಟಿಸಿ ಕೊಲೆ ಮಾಡಿ ಓಡಿ ಹೋಗಿರುತ್ತಾನೆಂದು

ಗೊತ್ತಾಯಿತು ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಮತ್ತು ಆಕೆ ಹೆಂಡತಿ ಜ್ಯೋತಿ ನಾನು ವಾಸ ಇದ್ದ ಮನೆಯ ಮೇಲ್ಭಾಗದಲ್ಲಿ ವಾಸ ಇದ್ದು ಆರೋಪಿ ಹೆಂಡತಿಗೆ ಕಿರುಕುಳ ಕೊಡುತ್ತಿದ್ದ ವಿಚಾರ ನನಗೆ ಗೊತ್ತಿದ್ದರು ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: ಆರೋಪಿತನ ಪರ ಶ್ರೀ.ಎಸ್.ಜಿ.ಜೆ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.